**Akashvani : Bangalore**
**National Bulletin In Kannada**
**12.04.2025 / 19.35 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><*<><>*><>**

## ಮುಖ್ಯಾಂಶಗಳು

೧. ಕರ್ನಾಟಕದ ಶರಾವತಿ ಸೇರಿದಂತೆ ದೇಶದ ಆರು ಜಲಶಕ್ತಿ ಯೋಜನೆಗಳಿಗೆ ಕೇಂದ್ರ ಸರ್ಕಾರ ಅನುಮೋದನೆ

೨. ಮಹಾರಾಷ್ಟ್ರದ ರಾಯಗಢ ಕೋಟೆ ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರ ಬದ್ಧ- ಗೃಹ ಸಚಿವ ಅಮಿತ್ ಶಾ

೩. ರೋಸ್ ವ್ಯಾಲಿ ಹಗರಣ; ವಂಚನೆಗೊಳಗಾದ ಹೂಡಿಕೆದಾರರಿಗೆ ೫೧೫ ಕೋಟಿ ರೂಪಾಯಿಗೂ ಹೆಚ್ಚಿನ ಹಣ ಹಸ್ತಾಂತರಿಸಿದ ಹಣಕಾಸು ಸಚಿವಾಲಯ

೪. ಐಎಸ್‌ಎಲ್ ಫುಟ್‌ಬಾಲ್ ಪಂದ್ಯಾವಳಿ; ಫೈನಲ್‌ನಲ್ಲಿ ಮೋಹನ್ ಬಗಾನ್- ಬೆಂಗಳೂರು ಫುಟ್‌ಬಾಲ್ ಕ್ಲಬ್ ಮುಖಾಮುಖಿ

೫. ಐಪಿಎಲ್ ಟಿ-೨೦ ಕ್ರಿಕೆಟ್; ಗುಜರಾತ್ ಟೈಟಾನ್ಸ್ ವಿರುದ್ಧ ಲಕ್ನೋ ಸೂಪರ್ ಜೈಂಟ್ಸ್‌ಗೆ ೬ ವಿಕೆಟ್ ಗೆಲುವು

**<><*<><>*><>**

೨೦೨೫ನೇ ಹಣಕಾಸು ವರ್ಷದಲ್ಲಿ ೬.೫ ಗಿಗಾವ್ಯಾಟ್ ಸಾಮರ್ಥ್ಯದ ದಾಖಲೆಯ ೬ ಜಲಶಕ್ತಿ ಪಂಪ್ಡ್ ಸ್ಟೋರೇಜ್ ಯೋಜನೆಗಳಿಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ ಎಂದು ಕೇಂದ್ರ ವಿದ್ಯುತ್ ಸಚಿವಾಲಯ ತಿಳಿಸಿದೆ. ಇಂಧನ ಸಂಗ್ರಹ ಪರಿಹಾರಗಳನ್ನು ಅಭಿವೃದ್ಧಿಪಡಿಸುವ ಭಾರತದ ನಿರಂತರ ಬದ್ಧತೆಯಲ್ಲಿ ಪ್ರಮುಖ ಮೈಲಿಗಲ್ಲಾಗಿದೆ. ಈ ಯೋಜನೆಗಳಲ್ಲಿ ಖಾಸಗಿ ವಲಯದ ಭಾಗವಹಿಸುವಿಕೆ ಸಾಕಷ್ಟು ಉತ್ತೇಜನಕಾರಿಯಾಗಿದೆ ಎಂದು ತಿಳಿಸಿದೆ. ಒಡಿಶಾದಲ್ಲಿ ಅಪ್ಪರ್ ಇಂದ್ರಾವತಿ ೬೦೦ ಮೆಗಾವ್ಯಾಟ್, ಕರ್ನಾಟಕದಲ್ಲಿ ಶರಾವತಿ ೨ ಸಾವಿರ ಮೆಗಾವ್ಯಾಟ್, ಮಹಾರಾಷ್ಟ್ರದಲ್ಲಿ ಭಿವ್‌ಪುರಿ ೧ ಸಾವಿರ ಮೆಗಾವ್ಯಾಟ್, ಮಹಾರಾಷ್ಟ್ರದಲ್ಲಿ ಭವಾಲಿ ೧ ಸಾವಿರದ ೫೦೦ ಮೆಗಾವ್ಯಾಟ್, ಮಧ್ಯಪ್ರದೇಶದಲ್ಲಿ ೧ ಸಾವಿರದ ೯೨೦ ಮೆಗಾವ್ಯಾಟ್ ಹಾಗೂ ಆಂಧ್ರಪ್ರದೇಶದಲ್ಲಿ ಚಿತ್ರಾವತಿ ೫೦೦ ಮೆಗಾವ್ಯಾಟ್ ಯೋಜನೆಗಳಿಗೆ ಅನುಮೋದನೆ ನೀಡಿದೆ.

**<><*<><>*><>**

ಛತ್ರಪತಿ ಶಿವಾಜಿ ಮಹಾರಾಜರ ಐತಿಹಾಸಿಕ ಸ್ಥಳವಾದ ರಾಯಗಢ ಕೋಟೆಯನ್ನು ದೇಶದ ಯುವಕರಿಗೆ ದೇಶದ ಯುವಕರಿಗೆ ಸ್ಫೂರ್ತಿಯ ಮೂಲವಾಗಿ ಅಭಿವೃದ್ಧಿಪಡಿಸಲು ಕೇಂದ್ರ ಹಾಗೂ ಮಹಾರಾಷ್ಟ್ರ ಮಹಾರಾಷ್ಟ್ರ ಸರ್ಕಾರ ಬದ್ಧವಾಗಿವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಹೇಳಿದ್ದಾರೆ. ಮಹಾರಾಷ್ಟ್ರದ ರಾಯಗಢ ಕೋಟೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ೩೪೫ನೇ ಮಹಾರಾಜರ ೩೪೫ನೇ ಪುಣ್ಯತಿಥಿಯ ಸಂದರ್ಭದಲ್ಲಿ ಗೌರವ ನಮನ ಸಲ್ಲಿಸಿ ಮಾತನಾಡಿದ ಸಚಿವರು, ಮಾತನಾಡಿದ ಸಚಿವರು, ಸ್ವರಾಜ್ಯಕ್ಕಾಗಿ ಹೋರಾಟ ಎಂದಿಗೂ ನಿಲ್ಲಬಾರದು ಎನ್ನುವುದು ಛತ್ರಪತಿ ಎನ್ನುವುದು ಛತ್ರಪತಿ ಶಿವಾಜಿ ಮಹಾರಾಜರ ಸಂದೇಶವಾಗಿದೆ ಎಂದರು. ಪ್ರಸ್ತುತ ಪ್ರಧಾನಿ ನರೇಂದ್ರ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರ, ಶಿವಾಜಿ ಮಹಾರಾಜರ ಮಹಾರಾಜರ ದೃಷ್ಟಿಕೋನವನ್ನು ನಿಷ್ಠೆಯಿಂದ ಅನುಸರಿಸುತ್ತಿದ್ದು, ಇಡೀ ಜಗತ್ತಿಗೆ ಭಾರತವನ್ನು ಜಗತ್ತಿಗೆ ಭಾರತವನ್ನು ಭರವಸೆಯ ದಾರಿದೀಪವಾಗಿ ರೂಪಿಸಲು ಅವಿರತವಾಗಿ ಶ್ರಮಿಸುತ್ತಿದೆ ಎಂದು ಶ್ರಮಿಸುತ್ತಿದೆ ಎಂದು ಸಚಿವ ಅಮಿತ್ ಶಾ ಹೇಳಿದರು.

<><*<><>*><>

ರೋಸ್ ವ್ಯಾಲಿ ಪೊಂಜಿ ಹಗರಣದಿಂದ ಬಾಧಿತರಾದ ಲಕ್ಷಾಂತರ ಹೂಡಿಕೆದಾರರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆಯಾಗಿ, ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಆಸ್ತಿ ವಿಲೇವಾರಿ ಸಮಿತಿಯ ಅಧ್ಯಕ್ಷ ಡಿ.ಕೆ.ಸೇಠ್ ಅವರಿಗೆ ೫೧೫ ಕೋಟಿ ೩೧ ಲಕ್ಷ ರೂಪಾಯಿ ಹೆಚ್ಚಿನ ಬೇಡಿಕೆ ಹಣವನ್ನು ಇಂದು ಹಸ್ತಾಂತರಿಸಿದರು. ಹಣಕಾಸು ಸಚಿವಾಲಯದ ಹೇಳಿಕೆಯ ಪ್ರಕಾರ, ಈ ಹಣವು ಹಗರಣದಲ್ಲಿ ವಂಚನೆಗೊಳಗಾದ ಸುಮಾರು ೭.೫ ಲಕ್ಷ ಜನರಿಗೆ ಮರುಪಾವತಿಸಲು ಸಹಾಯ ಮಾಡುತ್ತದೆ. ಜಾರಿ ನಿರ್ದೇಶನಾಲಯವು ಪ್ರಸ್ತುತ ಪಶ್ಚಿಮ ಬಂಗಾಳ, ಒಡಿಶಾ, ಅಸ್ಸಾಂ ಮತ್ತು ತ್ರಿಪುರಾದಲ್ಲಿ ಹಣ ವರ್ಗಾವಣೆ ತಡೆ ಕಾಯ್ದೆಯಡಿಯಲ್ಲಿ ರೋಸ್ ವ್ಯಾಲಿ ಗ್ರೂಪ್ ವಿರುದ್ಧ ಐದು ಪ್ರತ್ಯೇಕ ಪ್ರಕರಣಗಳನ್ನು ತನಿಖೆ ನಡೆಸುತ್ತಿದ್ದು, ಈಗಾಗಲೇ ವಿಶೇಷ ನ್ಯಾಯಾಲಯಗಳಲ್ಲಿ ಆರೋಪಗಳನ್ನು ಸಲ್ಲಿಸಲಾಗಿದೆ.

<><*<><>*><>

ವೈಶಾಖಿ, ವಿಷು, ಬೊಹಾಗ್ ಬಿಹು, ಪೊಯಿಲಾ ಬೋಯಿಶಾಖ, ಮೇಷಾದಿ, ವೈಶಾಖಾದಿ ಮತ್ತು ಪುತ್ತಂಡು ಪಿರಾಪು ಹಬ್ಬದ ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ದೇಶದ ಜನತೆಗೆ ಶುಭಾಶಯ ಕೋರಿದ್ದಾರೆ.  ಈ ಹಬ್ಬಗಳು ರಾಷ್ಟ್ರದ ಅಭಿವೃದ್ಧಿಯ ಕಡೆಗೆ ಬದ್ಧತೆ ಮತ್ತು ಸಮರ್ಪಣೆಯೊಂದಿಗೆ ಕೆಲಸ ಮಾಡಲು ಜನರನ್ನು ಪ್ರೇರೇಪಿಸಲಿ ಎಂದು ರಾಷ್ಟ್ರಪತಿಗಳು ತಮ್ಮ ಸಂದೇಶದಲ್ಲಿ ಹಾರೈಸಿದ್ದಾರೆ. ಭಾರತದ ವಿವಿಧ ಭಾಗಗಳಲ್ಲಿ ಸುಗ್ಗಿಯ ಸಮಯದಲ್ಲಿ ಆಚರಿಸಲಾಗುವ ಈ ಹಬ್ಬಗಳು ದೇಶದ ಶ್ರೀಮಂತ ಸಾಮಾಜಿಕ ಸಂಪ್ರದಾಯಗಳು ಮತ್ತು ವೈವಿಧ್ಯತೆಯಲ್ಲಿ ಏಕತೆಯನ್ನು ಸಂಕೇತಿಸುತ್ತವೆ ಎಂದು ಹೇಳಿದ್ದಾರೆ. ಈ ಹಬ್ಬಗಳ ಮೂಲಕ, ರಾಷ್ಟ್ರವು ದೇಶದ ಅನ್ನದಾತ ರೈತರ ಕಠಿಣ ಪರಿಶ್ರಮವನ್ನು ಗೌರವಿಸುತ್ತದೆ ಮತ್ತು ಅವರಿಗೆ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ ಎಂದು ರಾಷ್ಟ್ರಪತಿಗಳು ಹೇಳಿದ್ದಾರೆ.

<><*<><>*><>

ಪ್ರಸಕ್ತ ವರ್ಷದ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ನಡೆಯಲಿರುವ ೫ನೇ ರಾಷ್ಟ್ರೀಯ ಸಮುದ್ರ ರಾಷ್ಟ್ರೀಯ ಸಮುದ್ರ ಮೀನುಗಾರಿಕೆ ಗಣತಿ- ಎಂ.ಎಫ್.ಸಿ-೨೦೨೫ ಕ್ಕಾಗಿ ಸಿದ್ಧತೆಗಳು ವೇಗ

ಸಿದ್ಧತೆಗಳು ವೇಗ ಪಡೆಯುತ್ತಿವೆ. ಈ ಜನಗಣತಿಯು, ಭಾರತದ ಕರಾವಳಿ ರಾಜ್ಯಗಳು ಮತ್ತು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸುಮಾರು ೧೨ ಲಕ್ಷ ಮೀನುಗಾರ ಕುಟುಂಬಗಳನ್ನು ಕುಟುಂಬಗಳನ್ನು ಒಳಗೊಳ್ಳುವ ನಿರೀಕ್ಷೆಯಿದೆ. ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಮತ್ತು ಹೈನುಗಾರಿಕೆ ಸಚಿವಾಲಯದ ಅಡಿಯಲ್ಲಿ ಮೀನುಗಾರಿಕೆ ಇಲಾಖೆಯಿಂದ ಈ ಅಭಿಯಾನ ಅಭಿಯಾನ 'ಪ್ರಧಾನ ಮಂತ್ರಿ ಮತ್ಸ್ಯ ಸಂಪದ' ಯೋಜನೆಯ ಭಾಗವಾಗಿದೆ. ಕೇಂದ್ರ ಸಮುದ್ರ ಸಮುದ್ರ ಮೀನುಗಾರಿಕೆ ಸಂಶೋಧನಾ ಸಂಸ್ಥೆ, ಒಂಬತ್ತು ಕರಾವಳಿ ರಾಜ್ಯಗಳಲ್ಲಿ ಗಣತಿ ನಡೆಸಲು ಗಣತಿ ನಡೆಸಲು ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸಲಿದೆ. ಭಾರತೀಯ ಮೀನುಗಾರಿಕೆ ಸಮೀಕ್ಷಾ ಮೀನುಗಾರಿಕೆ ಸಮೀಕ್ಷಾ ಸಂಸ್ಥೆ, ದ್ವೀಪಗಳು ಸೇರಿದಂತೆ ಕೇಂದ್ರಾಡಳಿತ ಪ್ರದೇಶಗಳಲ್ಲಿ ದತ್ತಾಂಶ ಪ್ರದೇಶಗಳಲ್ಲಿ ದತ್ತಾಂಶ ಸಂಗ್ರಹ ಕಾರ್ಯ ನಿರ್ವಹಿಸುತ್ತದೆ. ಈ ಗಣತಿಯು, ಸಮುದ್ರ ಮೀನುಗಾರಿಕಾ ಸಮುದ್ರ ಮೀನುಗಾರಿಕಾ ವಲಯಗಳ ಸಮಗ್ರ ಜನಸಂಖ್ಯಾ ಮತ್ತು ಜೀವನೋಪಾಯದ ದತ್ತಾಂಶ ದತ್ತಾಂಶ ಹಾಗೂ ಮೀನುಗಾರಿಕೆ ಹಡಗು, ಉಪಕರಣ, ಬಂದರುಗಳು, ನಿಲುಗಡೆ ಕೇಂದ್ರಗಳು, ಸಂಸ್ಕರಣಾ ಘಟಕಗಳು ಮತ್ತು ಶೀತಲ ಸಂಗ್ರಹ ಸೌಲಭ್ಯಗಳಂತಹ ಮೂಲಸೌಕರ್ಯ ವಿವರಗಳನ್ನು ವಿವರಗಳನ್ನು ಸಂಗ್ರಹಿಸುವ ಗುರಿಯನ್ನು ಹೊಂದಿದೆ. ಭಾರತ ಸರ್ಕಾರದ ಮೀನುಗಾರಿಕೆ ಇಲಾಖೆಯ ಇಲಾಖೆಯ ಜಂಟಿ ಕಾರ್ಯದರ್ಶಿ ನೀತು ಕುಮಾರಿ ಪ್ರಸಾದ್ ಇತ್ತೀಚೆಗೆ ಗಣತಿಯ ಪ್ರಗತಿ ಪ್ರಗತಿ ಪರಿಶೀಲಿಸಿದರು. ಈ ಅಭಿಯಾನದ ಯಶಸ್ಸಿಗೆ ರಾಜ್ಯ ಸರ್ಕಾರಗಳು ಮತ್ತು ಅನುಷ್ಠಾನ ಅನುಷ್ಠಾನ ಸಂಸ್ಥೆಗಳ ನಡುವಿನ ಸಮನ್ವಯದ ಅಗತ್ಯತತೆಯನ್ನು ಒತ್ತಿ ಹೇಳಿದ್ದರು.

ಹೇಳಿದ್ದರು.

<><*<><>*><>

ಪದ್ಮಶ್ರೀ ಪುರಸ್ಕೃತ, ವನಜೀವಿ ಎಂದೇ ಖ್ಯಾತರಾದ ಹೈದರಾಬಾದ್ ಮೂಲದ ದಾರಿಪಲ್ಲಿ ರಾಮಯ್ಯ ಇಂದು ನಿಧನರಾಗಿದ್ದಾರೆ. ಅವರಿಗೆ ೮೭ ವರ್ಷ ವಯಸ್ಸಾಗಿತ್ತು. ಲಕ್ಷಾಂತರ ಗಿಡಗಳನ್ನು ನೆಟ್ಟು ಬೆಳೆಸುವ ಮೂಲಕ ಹಸಿರು ಹೋರಾಟಗಾರ ಎಂದು ಜನಪ್ರಿಯರಾಗಿದ್ದರು. ದಾರಿಪಲ್ಲಿ ರಾಮಯ್ಯರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು, ಸಾಮಾಜಿಕ ಜಾಲತಾಣದಲ್ಲಿ ಸಂತಾಪ ಸೂಚಿಸಿದ್ದಾರೆ. ಲಕ್ಷಾಂತರ ಗಿಡಗಳನ್ನು ನೆಟ್ಟು ರಕ್ಷಿಸಲು ತಮ್ಮ ಜೀವನವನ್ನು ಮುಡಿಪಾಗಿಟ್ಟ ದಾರಿಪಲ್ಲಿ ರಾಮಯ್ಯ ಅವರನ್ನು ಸ್ಥಿರತೆಯ ಹೋರಾಟಗಾರ ಎಂದು ಸ್ಮರಿಸಲಾಗುತ್ತದೆ ಎಂದು ಹೇಳಿದ್ದಾರೆ. ಪ್ರಕೃತಿಯ ಮೇಲಿನ ಅವರ ಆಳವಾದ ಪ್ರೀತಿ, ಭವಿಷ್ಯದ ಪೀಳಿಗೆಯ ಬಗ್ಗೆ ಕಾಳಜಿಯನ್ನು ಪ್ರತಿಬಿಂಬಿಸುತ್ತದೆ. ಅವರ ಕೆಲಸವು ದೇಶದ ಯುವಕರನ್ನು ಹಸಿರು ಗ್ರಹವನ್ನು ನಿರ್ಮಿಸಲು ಪ್ರೇರೇಪಿಸುತ್ತದೆ ಎಂದು ಪ್ರಧಾನಿ ತಿಳಿಸಿದ್ದಾರೆ.

<><*<><>*><>

ಖ್ಯಾತ ಕಥಕ್ ನೃತ್ಯಗಾರ್ತಿ, ಪದ್ಮವಿಭೂಷಣ, ಪದ್ಮಶ್ರೀ ಪುರಸ್ಕೃತೆ ಕುಮುದಿನಿ ಲಖಿಯಾ ಇಂದು ನಿಧನರಾಗಿದ್ದಾರೆ. ಅವರಿಗೆ ೯೪ ವರ್ಷ ವಯಸ್ಸಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು ಕುಮುದಿನಿ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದು, ಅಹಮದಾಬಾದ್ ಖ್ಯಾತ ಕಥಕ್ ಪ್ರತಿಭಾನ್ವಿತೆ ಮತ್ತು ಕದಂಬ್ ನೃತ್ಯ ಕೇಂದ್ರದ ಸಂಸ್ಥಾಪಕಿ ಕುಮುದಿನಿ ಲಖಿಯಾ ಅವರು ಕಥಕ್‌ಗೆ ತಮ್ಮ ಜೀವಮಾನವನ್ನು ಸಮರ್ಪಣೆ ಮಾಡಿದ್ದರು ಎಂದು ಹೇಳಿದ್ದಾರೆ.

<><*<><>*><>

ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಮತ್ತು ಮಾವೋವಾದಿಗಳ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ಮಾವೋವಾದಿಗಳು ಮೃತಪಟ್ಟಿದ್ದಾರೆ. ಕೇಂದ್ರೀಯ ಮೀಸಲು ಪೊಲೀಸ್ ಪಡೆ, ಜಿಲ್ಲಾ ಮೀಸಲು ಪಡೆ ಮತ್ತು ವಿಶೇಷ ಕಾರ್ಯಪಡೆಯ ಕೋಬ್ರಾ ಬೆಟಾಲಿಯನ್‌ನ ಜಂಟಿ ತಂಡವು ಇಂದ್ರಾವತಿ ಅರಣ್ಯ ಪ್ರದೇಶದಲ್ಲಿ ಇಂದು ಬೆಳಿಗ್ಗೆ ಕಾರ್ಯಾಚರಣೆ ನಡೆಸಿದ್ದು, ಭದ್ರತಾ ಪಡೆಗಳು ಮತ್ತು ಮಾವೋವಾದಿಗಳ ನಡುವೆ ಗುಂಡಿನ ದಾಳಿ ನಡೆಯಿತು. ಕಾರ್ಯಾಚರಣೆ ಸ್ಥಳದಿಂದ ಭಾರೀ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ.

**<><*<><>*><>**

ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್ ಪ್ರದೇಶದಲ್ಲಿ ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ಭಯೋತ್ಪಾದಕರು ಸಾವನ್ನಪ್ಪಿದ್ದು, ಸ್ಥಳದಲ್ಲಿ ಭಾರೀ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಜಿಲ್ಲೆಯ ಛಾತ್ರೂ ಪ್ರದೇಶದ ಕಾಡುಗಳಲ್ಲಿ ಭಯೋತ್ಪಾದಕರ ಅನುಮಾನಾಸ್ಪದ ಚಲನವಲನಗಳನ್ನು ಬುಧವಾರ ಗಮನಿಸಿದ ನಂತರ ಗುಂಡಿನ ಚಕಮಕಿ ಆರಂಭಗೊಂಡಿತ್ತು. ಆರಂಭಿಕ ಸಂಪರ್ಕದ ನಂತರ ಭಯೋತ್ಪದಕರು ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾದರೂ, ನಂತರ ಹೊಸ ಸಂಪರ್ಕ ಸಾಧಿಸಿ ಗುಂಡಿನ ಚಕಮಕಿ ನಡೆಯಿತು. ಜಮ್ಮು ಪ್ರದೇಶದ ಗುಡ್ಡಗಾಡು ಜಿಲ್ಲೆಗಳ ವಿವಿಧ ಸ್ಥಳಗಳ ನಡುವೆ ಭಯೋತ್ಪಾದಕರ ಮೇಲೆ ನಿಗಾ ಇಡಲು ಭದ್ರತಾ ಸಂಸ್ಥೆಗಳು ದೋಡಾ ಜಿಲ್ಲೆಯ ಭದೇರ್ವಾ ಪ್ರದೇಶಕ್ಕೆ ಕಣ್ಗಾವಲು ವ್ಯಾಪ್ತಿಯನ್ನು ವಿಸ್ತರಿಸಿವೆ.

**<><*<><>*><>**

ವಕ್ಫ್ ತಿದ್ದುಪಡಿ ಕಾಯ್ದೆ- ೨೦೨೫ ರ ವಿರುದ್ಧ ನಡೆದ ಪ್ರತಿಭಟನೆ ವೇಳೆ ಹಿಂಸಾಚಾರಕ್ಕೆ ಸಾಕ್ಷಿಯಾಗಿದ್ದ ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯ ಸುತಿ, ಸಂಶೇರ್‌ಗಂಜ್, ಜಲಂಗಿ, ಲಾಲ್‌ಗೋಲಾ ಮತ್ತು ಧುಲಿಯಾನ್ ಪ್ರದೇಶಗಳಲ್ಲಿ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಜನರಿಗೆ ಶಾಂತಿ ಕಾಪಾಡುವಂತೆ ಮನವಿ ಮಾಡಿದ್ದು, ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿರುವವರಿಗೆ ಶಿಕ್ಷೆಯಾಗಲಿದೆ ಎಂದು ಹೇಳಿದ್ದಾರೆ. ವಕ್ಫ್ ತಿದ್ದುಪಡಿ ಕಾಯ್ದೆ-೨೦೨೫ ಅನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದ್ದು, ಪಶ್ಚಿಮ ಬಂಗಾಳದಲ್ಲಿ ಜಾರಿ ಮಾಡುವುದಿಲ್ಲ ಎಂದು ಪುನರುಚ್ಚರಿಸಿದ್ದಾರೆ. ಮತ್ತೊಂದೆಡೆ, ಮುರ್ಷಿದಾಬಾದ್ ಜಿಲ್ಲೆಯಲ್ಲಿನ ಹಿಂಸಾಚಾರ ನಿಯಂತ್ರಣಕ್ಕೆ ತರಲು ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಬೇಕಿದೆ. ಈ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಸಂಪರ್ಕದಲ್ಲಿರುವುದಾಗಿ ಪಶ್ಚಿಮ ಬಂಗಾಳ ಬಿಜೆಪಿ ರಾಜ್ಯ ಅಧ್ಯಕ್ಷ ಡಾ.ಸುಕಾಂತ ಮಜುಂದಾರ್ ಹೇಳಿದ್ದಾರೆ. ಹಿಂಸಾಚಾರ ಪೀಡಿತ ಪ್ರದೇಶಗಳ ಜನರು ವದಂತಿಗಳನ್ನು ನಂಬಬಾರದು, ಕಾನೂನು ಮತ್ತು ಸುವ್ಯವಸ್ಥೆಯನ್ನು ತಮ್ಮ ಕೈಗೆ ತೆಗೆದುಕೊಳ್ಳಬಾರದು ಎಂದು ಪಶ್ಚಿಮ ಬಂಗಾಳ ಪೊಲೀಸ್ ಮಹಾನಿರ್ದೇಶಕ ರಾಜೀವ್ ಕುಮಾರ್ ವಿನಂತಿಸಿದ್ದಾರೆ.

**<><*<><>*><>**

ಕೋಲ್ಕತ್ತಾದಲ್ಲಿ ನಡೆಯುತ್ತಿರುವ ಇಂಡಿಯನ್ ಸೂಪರ್ ಲೀಗ್ ಫುಟ್ ಬಾಲ್ ಫೈನಲ್ ಪಂದ್ಯದಲ್ಲಿ ಮೋಹನ್ ಬಗಾನ್ ಸೂಪರ್ ಜೈಂಟ್ ತಂಡ ಮತ್ತು ಬೆಂಗಳೂರು ಎಫ್‌ಸಿ ಮುಖಾಮುಖಿಯಾಗಿವೆ. ಮೋಹನ್ ಬಗಾನ್ ತಂಡವು ೫ನೇ ಬಾರಿಗೆ ಐಎಸ್‌ಎಲ್ ಫೈನಲ್ ಪಂದ್ಯದಲ್ಲಿ ಪ್ರವೇಶಿಸಿದ್ದು, ಎರಡನೇ ಬಾರಿಗೆ ಪ್ರಶಸ್ತಿ ಗೆಲ್ಲುವ ಗುರಿ ಹೊಂದಿದೆ. ಮತ್ತೊಂದೆಡೆ, ಬೆಂಗಳೂರು ತಂಡವು ೨೦೨೩ ರ ಫೈನಲ್‌ನಲ್ಲಿ ಮೋಹನ್ ಬಗಾನ್ ವಿರುದ್ಧದ ಸೋಲಿಗೆ ಪ್ರತ್ಯುತ್ತರ ನೀಡುವ ಪ್ರಯತ್ನದಲ್ಲಿದೆ. ಎರಡು ತಂಡಗಳ ನಡುವಿನ ಜಿದ್ದಾಜಿದ್ದಿನ ಪಂದ್ಯ ಪ್ರಗತಿಯಲ್ಲಿದೆ.

<><*<><>*><>

ಇಂಡಿಯನ್ ಪ್ರೀಮಿಯರ್ ಲೀಗ್ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯಾವಳಿಯಲ್ಲಿ ಉತ್ತರಪ್ರದೇಶದ ಏಕಾನಾ ಕ್ರೀಡಾಂಗಣದಲ್ಲಿಂದು ನಡೆದ ದಿನದ ಮೊದಲ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡದ ವಿರುದ್ಧ ಲಕ್ನೋ ಸೂಪರ್ ಜೈಂಟ್ಸ್ ತಂಡ ೭ ವಿಕೆಟ್‌ಗಳಿಂದ ಗೆಲುವು ಸಾಧಿಸಿದೆ. ತೆಲಂಗಾಣದ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಪ್ರಗತಿಯಲ್ಲಿರುವ ದಿನದ ಎರಡನೇ ಪಂದ್ಯದಲ್ಲಿ ಸನ್ ರೈಸರ್ಸ್ ಹೈದರಾಬಾದ್ ಹಾಗೂ ಪಂಜಾಬ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ಪಂಜಾಬ್ ಕಿಂಗ್ಸ್ ತಂಡ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <><*<>**